ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಗ್ರಾಅಪ:507:ಉಖಾಯೋ:2014(ಭಾ)ಬೆಂಗಳೂರು ದಿನಾಂಕ:29.04.2015

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಓಂಬುಡ್ಸ್‌ಮನ್‌ಗಳ ನೇಮಕಾತಿ

****

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ, 2005ರ ಪ್ರಕರಣ 27ರ ಉಪಪ್ರಕರಣ(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವೀಕರಿಸಲಾಗುವ ದೂರುಗಳನ್ನು ಪರಿಹರಿಸಿ ವಿಲೆಗೊಳಿಸಲು ಜಿಲ್ಲೆಗಳಿಗೆ ಓಂಬುಡ್ಸ್‌ಮನ್‌ಗಳನ್ನು ನೇಮಿಸಲು ದಿನಾಂಕ:16.01.2014 ರ ಪತ್ರದಲ್ಲಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರನ್ವಯ ಓಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಓಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದು, ಸ್ವೀಕರಿಸಲಾದ ಅರ್ಜಿಗಳನ್ನು ಸಮಿತಿಯ ಮುಂದೆ ದಿನಾಂಕ: 18.02.2015 ರಂದು ಮಂಡಿಸಲಾಗಿದ್ದು, ಸಮಿತಿಯು ಈ ಕೆಳಕಂಡ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿದ್ದು, ಈ ಸಂಬಂಧ ಸಾರ್ವಜನಿಕರಿಂದ ಪ್ರತಿಕ್ರಿಯೆ/ಆಕ್ಷೇಪಣೆಗಳನ್ನು ಆಹ್ವಾನಿಸಿ ಸ್ವೀಕೃತವಾಗುವ ಪ್ರತಿಕ್ರಿಯೆ/ಆಕ್ಷೇಪಣೆಗಳನ್ನು ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಲು ತೀರ್ಮಾನಿಸಿರುತ್ತದೆ.

**ತಾತ್ಕಾಲಿಕ ಓಂಬುಡ್ಸ್‌ಮನ್ ಅಭ್ಯರ್ಥಿಗಳ ಆಯ್ಕೆ ಪಟ್ಟಿ:**

| ಕ್ರ.ಸಂ | ಹೆಸರು | ಹುದ್ದೆಯ ಹೆಸರು | ಹಿಂದೆ ಹೊಂದಿದ್ದ ಹುದ್ದೆ | ವಿಳಾಸ | ಹಂಚಿಕೆ ಮಾಡಿರುವ ಜಿಲ್ಲೆ |
|---|---|---|---|---|---|
| 1 | ಶ್ರೀ ಅಪ್ಪಣ್ಣಾ ಜ್ಯೋತಿರಾಮ ಧುಮಾಳೆ | ಓಂಬುಡ್ಸ್‌ಮನ್ | ಆಡಳಿತಾಧಿಕಾರಿ, ಕಾಡಾ ಪ್ರೋಜೆಕ್ಟ್, ಬೆಳಗಾವಿ | #4860/ಬಿ/19, ಗಣೇಶ ದೇವಸ್ಥಾನದ ಎದುರು, ರೇಲನಗರ, ಸದಾಶಿವನಗರ, ಬೆಳಗಾವಿ. | ಬೆಳಗಾವಿ |
| 2 | ಶ್ರೀ.ಎಂ.ಆರ್.ಬಾಲಕೃಷ್ಣ | ಓಂಬುಡ್ಸ್‌ಮನ್ | ಉಪಕಾರ್ಯದರ್ಶಿ, (ಹಿರಿಯ ವೇತನ ಶ್ರೇಣಿ) | #37, ವೆಂಕಟ ನಿವಾಸ, 3ನೇ ಮಾದರಿ ಮನೆ,ಎನ್.ಆರ್.ಕಾಲೋನಿ, ಬಸವನಗುಡಿ, ಬೆಂಗಳೂರು-560004 | ಚಿಕ್ಕಬಳ್ಳಾಪುರ |
| 3 | ಶ್ರೀ ಬಂಡು ವಿಠ್ಠಲ್ ಭೋಸಲೆ | ಓಂಬುಡ್ಸ್‌ಮನ್ | ಉಪಕಾರ್ಯದರ್ಶಿ, (ಹಿರಿಯ ವೇತನ ಶ್ರೇಣಿ) | C/o ಪವನ ನಿಲಯ, ನವಜೀವನ ಕಾಲೋನಿ, ಬಿ.ಎಲ್.ಡಿ.ಇ.ಆಸ್ಪತ್ರೆ ಎದುರು ಅಂಬಾ ಭವಾನಿ ದೇವಸ್ಥಾನದ ಹತ್ತಿರ, ವಿಜಯಪುರ-586103 | ವಿಜಯಪುರ |
| 4 | ಶ್ರೀ.ಸುಬಾಷ್ ಕೃಷ್ಣಪ್ಪ ಹುಚಾರೆಡ್ಡಿ | ಓಂಬುಡ್ಸ್‌ಮನ್ | ಹಿರಿಯ ಸರ್ಕಾರಿ ಪಬ್ಲಿಕ್ ಪ್ರಾಸಿಕ್ಯೂಟರ್ | "ಸವಿನೆನಸು" ನಂ.427, /428 8ನೇ ಮುಖ್ಯ ರಸ್ತೆ, 8ನೇ ಕ್ರಾಸ್, ವಾರ್ಡ್ ನಂ.42,/ನಂದಿನಿ ಲೇಔಟ್, ಬೆಂಗಳೂರು-96 | ಬಾಗಲಕೋಟೆ |
| 5 | ಶ್ರೀ ಬಿ.ವೈ.ಮಾದಿನೂರ | ಓಂಬುಡ್ಸ್‌ಮನ್ | ಮುಖ್ಯ ಲೆಕ್ಕಾಧಿಕಾರಿ, ಜಿ.ಪಂ, ಕೊಪ್ಪಳ | ನಂ.11, ಹುಡ್ಕೊ ಕಾಲೋನಿ ಹೊಸಪೇಟೆ ರೋಡ್, ಕೊಪ್ಪಳ-583231. | ಕೊಪ್ಪಳ |
| 6 | ಶ್ರೀ ಕುಂಸಿ ಬಸವ ಕುಮಾರ್ | ಓಂಬುಡ್ಸ್‌ಮನ್ | ಸದಸ್ಯರು ಕೃಷಿ ವಿಶ್ವವಿದ್ಯಾನಿಲಯದ | ಹೊರಿಹೊಳೆ ನಿಲಯ, #159/4, 1ನೇ ಮೈನ್, 3ನೇ ಕ್ರಾಸ್, ಕೃಷಿನಗರ, ಶಿವಮೊಗ್ಗ | ಶಿವಮೊಗ್ಗ |
| 7 | ಶ್ರೀ ಕೆ.ಎಲ್.ಸುಬ್ರಹ್ಮಣ್ಯ | ಓಂಬುಡ್ಸ್‌ಮನ್ | ಮುಖ್ಯ ಯೋಜನಾಧಿಕಾರಿ, ಜಿ.ಪಂ.ಉತ್ತರಕನ್ನಡ | ನಂ.62, ಡಿ-10, ಬಿ-14, ಹಳೆ ಬಾರ್ ಲೈನ್ ರೋಡ್, ಶಿವಮೊಗ್ಗ-577202. | ಚಿಕ್ಕಮಗಳೂರು |
| 8 | ಶ್ರೀಮತಿ ಎಂ.ವಿಜಯಕುಮಾರಿ ಶಣೈ | ಓಂಬುಡ್ಸ್‌ಮನ್ | ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಮಂಗಳೂರು | ಶ್ರೀ ಹರ್ಷ, ರಾಮನಗರ, ಮುರ-ಕೆದಿಲ ರಸ್ತೆ, ಪಡ್ನೂರು ಅಂಚೆ, ಪುತ್ತೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ-574220. | ದಕ್ಷಿಣ ಕನ್ನಡ |

ಆದ್ದರಿಂದ ತಾತ್ಕಾಲಿಕ ಓಂಬುಡ್ಸ್‌ಮನ್ ಪಟ್ಟಿಯನ್ನು ಸಾರ್ವಜನಿಕರ ಪ್ರತಿಕ್ರಿಯೆ / ಆಕ್ಷೇಪಣೆಗಳಿಗಾಗಿ ಈ ಮೂಲಕ ಪ್ರಕಟಿಸಿದೆ. ಯಾವುದಾದರೂ ಪ್ರತಿಕ್ರಿಯೆ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಲಿಖಿತ ರೂಪದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, 3ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001. ಇವರಿಗೆ ನೇರವಾಗಿ ಅಥವಾ Fax:080-2237738, nregs@gmail.com ಅಥವಾ Emaill:karnregs.ombudsman@gmail.com ಮೂಲಕ ಈ ಪ್ರಕಟಣೆ ದಿನಾಂಕದಿಂದ 30 ದಿನಗಳೊಳಗಾಗಿ ತಲುಪುವಂತೆ ಸಲ್ಲಿಸಬಹುದಾಗಿದೆ.

(ಮುನೀಶ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

Kannada Gen Ltr/Nadavali